# ಪ್ರಾರ್ಥನೆಯ ಉದಾತ್ತ ರೂಪ

ಇತ್ತೀಚೆಗೆ ಸಚಿವರೊಬ್ಬರು ತಮ್ಮ ಮೇಲೆ ಮಾಡಲಾದ ಆಪಾದನೆಗಳಿಂದನೊಂದು, ಹಲವು ದೇವಾಲಯಗಳಿಗೆ ಭೇಟಿ ನೀಡಿ, ತಮ್ಮನ್ನು ನೋಯಿಸಿದವರಿಗೆ ತಕ್ಕ ಶಿಕ್ಷೆಯಾಗಲೆಂದು ಪ್ರಾರ್ಥನೆ ಸಲ್ಲಿಸಿದ್ದ ಪ್ರಕರಣ ಸುದ್ದಿ ಮಾಧ್ಯಮಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಂಡಿತಷ್ಟೆ? ಸಚಿವರ ಈ ವರ್ತನೆ ಜನ ಸಾಮಾನ್ಯರ ವರ್ತನೆಗಿಂತ ಭಿನ್ನವಾಗಿಲ್ಲ. ತನ್ನ ಹಿತ, ಕೆಲವೊಮ್ಮೆ ತನ್ನ ಹಿತಕ್ಕೆ ಧಕ್ಕೆ ಮಾಡಿದವರ ವಿರುದ್ಧ ಪ್ರತೀಕಾರ– ಇವಿಷ್ಟೇ ಸಾಮಾನ್ಯರ ಪ್ರಾರ್ಥನೆಯ ಸೀಮಿತ ಉದ್ದೇಶವಾಗಿರುತ್ತದೆ. ಮೂಲತಃ ಮನುಷ್ಯ ಆತ್ಮ ಕೇಂದ್ರಿತ ಪ್ರಾಣಿ. ಆದ್ದರಿಂದಲೇ ಆತನ ಪ್ರಾರ್ಥನೆಯ ಹಿನ್ನೆಲೆಯಲ್ಲಿ ಸ್ವಾರ್ಥದ ಎಳೆಯೊಂದಿರುವುದು ಅತ್ಯಂತ ಸಹಜ. ತನಗೆ, ತನ್ನವರಿಗೆ ಒಳ್ಳೆಯದಾಗಲೆಂದು ದೇವರನ್ನು ಪ್ರಾರ್ಥಿಸುವುದರಲ್ಲಿ ತಪ್ಪೇನಿಲ್ಲ ಅಂಥ ಪ್ರಾರ್ಥನೆಯ ಹಿಂದೆ ವಿಶಾಲ ಸಮುದಾಯದ ಸುಖವನ್ನು ಕುರಿತಾದ ಕಾಳಜಿ ಇರುವುದಿಲ್ಲ. ಆದರೆ ಬೇರೊಬ್ಬರ ಕೇಡನ್ನೂ ಅದು ಹಾರೈಸುವುದಿಲ್ಲ. ಅದನ್ನು 'ರಾಜಸ ಪ್ರಾರ್ಥನೆ' ಎನ್ನಬಹುದು. ಬೇರೊಬ್ಬರಿಗೆ ಕೆಡುಕಾಗಲೆಂದು ದೇವರನ್ನು ಬೇಡಿಕೊಳ್ಳುವುದು 'ತಾಮಸ ಪ್ರಾರ್ಥನೆ'. ಸ್ವಾರ್ಥದ ಸಂಕುಚಿತ ಪರಿಧಿಯನ್ನು ಮೀರಿ, ಎಲ್ಲರ ಒಳಿತಿಗಾಗಿ ಪ್ರಾರ್ಥಿಸುವವರೂ ಇದ್ದಾರೆ. ಅಂಥವರದು 'ಸಾತ್ವಿಕ ಪ್ರಾರ್ಥನೆ'. ಇದೇ ಪ್ರಾರ್ಥನೆಯ ಉದಾತ್ತ ರೂಪ. ಒಂದು ಸರಳ ಉದಾಹರಣೆಯಿಂದ ಈ ವಿಚಾರವನ್ನು ಇನ್ನಷ್ಟು ಸ್ಪಷ್ಟಗೊಳಿಸಬಹುದು. ಕುರುಡನೊಬ್ಬ ತನ್ನ ಶತ್ರುವೂ ತನ್ನಂತೆಯೇ ಕುರುಡುನಾಗಲೆಂದು ದೇವರನ್ನು ಬೇಡಿಕೊಂಡರೆ, ಆತನದು ತಾಮಸ ಪ್ರಾರ್ಥನೆ. ತನ್ನ ಕುರುಡುತನ ಹೋಗುವಂತಾಗಲಿ ಎಂದು ಮಾಡುವ ಪ್ರಾರ್ಥನೆ ರಾಜಿಸ ಪ್ರಾರ್ಥನೆ. ತನಗಲ್ಲದೆ, ತನ್ನಂಥ ಎಲ್ಲ ಕುರುಡರಿಗೂ ಕಣ್ಣು ಬರುವಂತಾಗಲೆಂದು ಪ್ರಾರ್ಥಿಸುವುದು ಸಾತ್ವಿಕ ಪ್ರಾರ್ಥನೆ.

ವಾಸ್ತವವಾಗಿ ಎಲ್ಲ ಪ್ರಾರ್ಥನೆಗಳ ಹಿಂದಿರುವುದೂ ಹಾರೈಕೆಯ ಧ್ವನಿಯೇ, ಹಾರೈಕೆಯನ್ನು ಈಡೇರಿಸುವಂತೆ ಮಾಡುವ ಬೇಡಿಕೆಯೇ ಪ್ರಾರ್ಥನೆ. ತನ್ನ ಹಿತಕ್ಕಷ್ಟೇ ಸೀಮಿತಗೊಳ್ಳದೆ, ಸಮುದಾಯದ ಹಿತವನ್ನು ಕುರಿತಾದ ಪ್ರಾರ್ಥನಾ ರೂಪದ ಹಾರೈಕೆಗಳು ಮನುಷ್ಯನನ್ನು ಎತ್ತರಕ್ಕೇರಿಸುತ್ತವೆ. ಗಾಂಧೀಜೀಯವರ ಔನ್ನತ್ಯದ ರಹಸ್ಯ ಅವರ ಪ್ರಾರ್ಥನಾ ಸಭೆಗಳಲ್ಲಿ ಪ್ರಕಟವಾಗುತ್ತಿತ್ತೆಂಬುದನ್ನು ನೆನಪಿಸಿಕೊಳ್ಳಬೇಕು. ಈ ಕಾರಣದಿಂದಲೇ ನಮ್ಮವರು ನಮ್ಮ ನಿತ್ಯ ಜೀವನದಲ್ಲಿ ಕೆಲವು ಪ್ರಾರ್ಥನೆಗಳನ್ನು ಪಠಿಸುವ, ಅವುಗಳ ಬಗೆಗೆ ಧ್ಯಾನಿಸುವ ಅಭ್ಯಾಸ ವಿರಿಸಿಕೊಂಡಿದ್ದರು. ನಮಗೆಲ್ಲರಿಗೂ ಸಾಕಷ್ಟು ಪರಿಚಿತವಾಗಿರುವ– ತೈತ್ತಿರೀಯ ಉಪನಿಷತ್ತಿನ– ಒಂದು ಶ್ಲೋಕ ಇಂಥ ಅಭ್ಯಾಸಕ್ಕೊಂದು ಉದಾಹರಣೆ: 'ಸಹನಾವವತು ಸಹನೌಭುನಕ್ತು ಸಹವೀರ್ಯಂ ಕರವಾವಹೈ ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ ಓಂ ಶಾಂತಿಃ ಶಾಂತಿಃ ಶಾಂತಿಃ' ಉಪನಿಷತ್ ಕಾಲದ ಆಶ್ರಮ ಗುರುಕುಲದಲ್ಲಿ ಗುರುವು ಶಿಷ್ಯನ ಜೊತೆಗೂಡಿ ಪ್ರತಿನಿತ್ಯ ಮಾಡುತ್ತಿದ್ದ ಪ್ರಾರ್ಥನೆ ಇದು. '(ಗುರು ಶಿಷ್ಯರಾದ) ನಮ್ಮಿಬ್ಬರನ್ನೂ ಆತನು ರಕ್ಷಿಸಲಿ; ನಮ್ಮಿಬ್ಬರನ್ನು ಅವನು ಪೋಷಿಸಲಿ; ನಮ್ಮಿಬ್ಬರ ಅಧ್ಯಯನವೂ ತೇಜಸ್ವಿಯಾಗುವಂತಾಗಲಿ; ನಮ್ಮಲ್ಲಿ ದ್ವೇಷವಿಲ್ಲದಂತಾಗಲಿ; ಎಲ್ಲೆಲ್ಲಿಯೂ ಶಾಂತಿ ನೆಲಸಲಿ!' –ಇದು ಈ ಪ್ರಾರ್ಥನೆಯ ಸರಳ ಅರ್ಥ.

ಈ ಪ್ರಾರ್ಥನೆಯಲ್ಲಿನ ಆಶಯ ಅದೆಷ್ಟು ಮನನಯೋಗ್ಯವೆಂಬುದನ್ನು ಪರಿಭಾವಿಸಬೇಕು. ಪ್ರಾರ್ಥಿಸುವಾತ ಶಾಸ್ತ್ರ ಪಾರಂಗತನಾದ ಗುರು, ಸಹಜವಾಗಿಯೇ ಆತನಿಗೆ ಶಿಷ್ಯನಿಗಿಂತ ತಾನು ಮೇಲು ಎಂಬ ಅಹಂಕಾರ ಇರಬೇಕಲ್ಲವೆ? ಆದರೆ ಇಲ್ಲಿ ಗುರು ಶಿಷ್ಯರ ನಡುವೆ ಮೇಲರಿಮೆ, ಕೀಳರಿಮೆಗಳ ತರತಮ ಭಾವವಿಲ್ಲ, ಇಬ್ಬರನ್ನು ಭಗವಂತ ರಕ್ಷಿಸಬೇಕು; ಪೋಷಿಸಬೇಕು; ಇಬ್ಬರೂ ಸೇರಿ ದುಡಿಯುವಂತಾಗಬೇಕು– ಎಂಬುದು ಗುರುವಿನ ಹಾರೈಕೆ. ಈ ಹಾರೈಕೆಯಲ್ಲಿ ಗುರುವಿನಲ್ಲಿರುವ ಶಿಷ್ಯ ವಾತ್ಸಲ್ಯವೂ ಪ್ರಕಟವಾಗುತ್ತದೆ. ತಮ್ಮಿಬ್ಬರ ಅಧ್ಯಯನ ತೇಜಸ್ವಿಯಾಗಿರಲಿ ಎಂಬುದಂತೂ ಬಹುದೊಡ್ಡ ಹಾರೈಕೆ. ಗುರುವಾದವನು 'ಜ್ಞಾನ ಸಂತೃಪ್ತ'ನಾಗಬಾರದು; ಶಿಷ್ಯರೊಂದಿಗೆ ತಾನೂ ಅಧ್ಯಯನ ಪ್ರವೃತ್ತನಾಗಬೇಕು. ಅಧ್ಯಯನ ಪ್ರವಚನಗಳೆರಡೂ ಜೊತೆ ಜೊತೆಗೇ ನಡೆದಾಗ ಜ್ಞಾನ ಪ್ರಖರಗೊಳ್ಳುತ್ತದೆ. ಪರಸ್ಪರರಲ್ಲಿ ಜ್ಞಾನದ ವಿನಿಮಯವಾಗುತ್ತದೆ; ಆಗ ವಿದ್ಯೆಗೆ ತೇಜಸ್ಸು ಪ್ರಾಪ್ತವಾಗುತ್ತದೆ. ಆದ್ದರಿಂದ ಉಪನಿಷತ್ತಿನ ಋಷಿ ಗುರು 'ತೇಜಸ್ವಿನಾವಧೀತ ಮಸ್ತು' ಎಂದು ಪ್ರಾರ್ಥಿಸಿರುವುದು! ಜೊತಗೆ ಈ ಪ್ರಾರ್ಥನೆ ಯಾವುದೇ ಜಾತಿ ಮತ ಧರ್ಮಗಳ ಬಂಧನಕ್ಕೆ ಒಳಗಾಗಿರುವಂಥದಲ್ಲ. ಧರ್ಮ ನಿರಪೇಕ್ಷವಾಗಿ, ಸಾರ್ವಕಾಲಿಕ ಹಾಗೂ ಸಾರ್ವದೇಶಿಕ ಹಾರೈಕೆಗಳನ್ನೊಳಗೊಂಡ ಇಂಥ ಸಾತ್ವಿಕ ಪ್ರಾರ್ಥನೆಗಳು ಕೇವಲ 'ಮುಖೋದ್ಗತ'ವಾಗಿ ಉಳಿಯದೆ, 'ಹೃದ್ಗತ'ವಾದಾಗ ಮಾತ್ರ ಮನುಷ್ಯನ ಜೀವನ ಹಸನಾದೀತು.

■ ವೈನತೇಯ

## ಮಾತೇ ಮುತ್ತು

★ ಎಡವಿ ಬೀಳದೆ ಇರುವುದರಲ್ಲಿ ನಮ್ಮ ಮಹತ್ವ ಇರುವುದಲ್ಲ; ಬಿದ್ದಾಗಲೆಲ್ಲ ಎದ್ದು ನಿಲ್ಲುವುದರಲ್ಲಿದೆ.

–ಆಲಿವರ್ ಗೋಲ್ಡ್‌ಸ್ಮಿತ್

★ ನಿಮ್ಮ ಜೀವನದಲ್ಲಿ ಸಾಕಷ್ಟು ವಿಷಯಗಳನ್ನು ತಪ್ಪಾಗಿ ಮಾಡದೆ ಇದ್ದರೆ ನಿಮಗೆ ಕೆಲವೇ ವಿಷಯಗಳನ್ನು ಸರಿಯಾಗಿ ಮಾಡಲು ಬರುವುದಿಲ್ಲ.

–ವಾರೆನ್ ಬಫೆಟ್

★ ತನ್ನನ್ನು ತಾನೇ ಆಳಲಾಗದವನು ಇತರರನ್ನು ಆಳಲು ಸಾಧ್ಯವಿಲ್ಲ.

–ಲ್ಯಾಟಿನ್ ಗಾದೆ

★ ಹೊಸ ವರುಷವು ಬಹುದೆಂದಿಗೆ?
ಮಹಾಪುರುಷ ತರುವಂದಿಗೆ
ಅಲ್ಪಾಹಂಕಾರಗಳ ನುಂಗುತಲಿ
ಮಹಾಹಂಕಾರದೊಂದಿಗೆ.

–ಪು.ತಿ.ನರಸಿಂಹಾಚಾರ್

★ ಸಿಟ್ಟು ಏರಿದಾಗ ಪರಿಣಾಮದ ಬಗ್ಗೆ ಆಲೋಚಿಸಿ.

–ಕನ್‌ಫ್ಯೂಶಿಯಸ್

★ ಇನ್ನೇನು ನಾಳೆಯೇ ಸಾಯುತ್ತೇವೆ ಎನ್ನುವಂತೆ ಬದುಕಿ; ನಿರಂತರವಾಗಿ ಜೀವಿಸುತ್ತೇವೆ ಎಂದುಕೊಂಡು ಕಲಿಯಿರಿ.

–ಮಹಾತ್ಮ ಗಾಂಧೀಜಿ

★ ಯಾವ ಶ್ರೇಷ್ಠ ಕಲಾವಿದನೂ ವಸ್ತುಗಳನ್ನು ಇದ್ದಂತೆಯೇ ಗ್ರಹಿಸುವುದಿಲ್ಲ. ಹಾಗೆ ಗ್ರಹಿಸತೊಡಗಿದರೆ ಕಲಾವಿದನಾಗಿ ಆತ ಮುಗಿದಂತೆಯೇ.

–ಆಸ್ಕರ್ ವೈಲ್ಡ್

★ ಮಾವು ನಾವು, ಬೇವು ನಾವು;
ನೋವು ನಲಿವು ನಮ್ಮವು.
ಹೂವು ನಾವು, ಹಸಿರು ನಾವು,
ಬೇವು ಬೆಲ್ಲ ನಮ್ಮವು.

–ಕೆ.ಎಸ್.ನರಸಿಂಹಸ್ವಾಮಿ

★ ಯುದ್ಧಭೂಮಿಯಲ್ಲಿ ದಶದಿಕ್ಕುಗಳಿಂದಲೂ ಬರುವ ಬಾಣಗಳನ್ನು ಆನೆಯೊಂದು ಎದುರಿಸುವಂತೆ ನಾನು ನಿಂದನೆಗಳನ್ನು ಎದುರಿಸುತ್ತೇನೆ.

–ಗೌತಮ ಬುದ್ಧ

★ ಕ್ರಿಯೆಯ ಬಗ್ಗೆ ನಾನು ಯಾವತ್ತೂ ಚಿಂತೆ ಮಾಡುವುದಿಲ್ಲ. ಆದರೆ ನಿಷ್ಕ್ರಿಯೆಯ ಬಗ್ಗೆ ಚಿಂತೆಯಾಗುತ್ತದೆ.

–ವಿನ್‌ಸ್ಟನ್ ಚರ್ಚಿಲ್

★ ಒಬ್ಬ ಒಳ್ಳೆಯ ಆಡಳಿತಗಾರ ತನ್ನ ಆಲೋಚನೆಗಳ ಜಾರಿಗೆ ಉತ್ತಮ ವ್ಯಕ್ತಿಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಾನೆ. ಮತ್ತು ಅವರು ಕೆಲಸ ಮಾಡುವಾಗ ಹಸ್ತಕ್ಷೇಪ ಮಾಡುವುದಿಲ್ಲ.

–ಥಿಯೊಡಾರ್ ರೂಸ್‌ವೆಲ್ಟ್

★ ಕಾಜಾಣಕೆ ಗಿಳಿ ಕೋಗಿಲೆಯಿಂಪಿಗೆ
ಮಲ್ಲಿಗೆ ಸಂಪಗೆ ಕೇದಗೆ ಸೊಂಪಿಗೆ
ಮಾವಿನ ಹೊಂಗೆಯ ತಳಿರಿನ ತಂಪಿಗೆ
ರಸರೋಮಾಂಚನಗೊಳುವಾತನ ಮನ
ಎಲ್ಲಿದ್ದರೆ ಏನ್, ಎಂತಿದ್ದರೆ ಏನ್, ಕನ್ನಡವೇ ಸತ್ಯ.

–ಕುವೆಂಪು

★ ನಿಮ್ಮನ್ನು ನೀವು ತಿಳಿದುಕೊಳ್ಳುವುದೇ ಜಗತ್ತಿಗೆ ನೀವು ಮಾಡಬಹುದಾದ ಅತ್ಯಂತ ಶ್ರೇಷ್ಠ ಸೇವೆ.

–ರಮಣ ಮಹರ್ಷಿ